# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 460(512) |
| ಸದಸ್ಯರ ಹೆಸರು | : ಶ್ರೀ. ಬಿ. ಜಿ. ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 09-03-2020 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯ ಮಂತ್ರಿಗಳು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್‌ಗಳನ್ನು ವಿತರಿಸಲಾಗಿದೆಯೇ; ವಿತರಿಸಿದ್ದಲ್ಲಿ; ಇದುವರೆಗೂ ಎಷ್ಟು ವಿದ್ಯಾರ್ಥಿಗಳಿಗೆ ಲ್ಯಾಪಟಾಪ್‌ಗಳನ್ನು ವಿತರಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಕಲಬುರಗಿ ಜಿಲ್ಲೆಯಲ್ಲಿ 7 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 2019-20ನೇ ಸಾಲಿನಲ್ಲಿ ಪ್ರಥಮ ವರ್ಷದ ಪದವಿಗೆ ಪ್ರವೇಶಾತಿ ಪಡೆದಿರುವ 4040 ವಿದ್ಯಾರ್ಥಿಗಳಿಗೆ ಹಾಗೂ ಯಾದಗಿರಿ ಜಿಲ್ಲೆಯಲ್ಲಿ 4 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಪ್ರಥಮ ವರ್ಷದ ಪದವಿಗೆ ಪ್ರವೇಶಾತಿ ಪಡೆದಿರುವ 1,935 ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್ ಅನ್ನು ಒದಗಿಸಲಾಗಿದೆ. (ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ) ಒಟ್ಟು 109916 ಲ್ಯಾಪ್ ಟಾಪ್‌ಗಳನ್ನು ಖರೀದಿಸಲು ಸರಬರಾಜುದಾರರಿಗೆ ಖರೀದಿ ಆದೇಶ ನೀಡಲಾಗಿದ್ದು, ಆ ಸಂದರ್ಭದಲ್ಲಿ 2019-20ನೇ ಸಾಲಿನ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡಿಲ್ಲದ ಕಾರಣ ಅಗತ್ಯವಾದ ಲ್ಯಾಪ್‌ಟಾಪಗಳ ಸಂಖ್ಯೆಯ ನಿಖರ ಮಾಹಿತಿ ಲಭ್ಯವಾಗಿರುವುದಿಲ್ಲ. ಕಲಬುರಗಿ ವಿಭಾಗ (ಲಾಟ್-4) ಕ್ಕೆ ಒಟ್ಟು 15830 ಲ್ಯಾಪ್‌ಟಾಪ್ ಗಳ ಅವಶ್ಯಕತೆ ಇದೆ ಎಂದು ಅಂದಾಜು ಮಾಡಲಾಗಿತ್ತು. ತದನಂತರಲ್ಲಿ ಕಾಲೇಜುಗಳಿಂದ ಮಾಹಿತಿಯನ್ನು ಪಡೆಯಲಾಗಿದ್ದು, ಕಲಬುರಗಿ ವಿಭಾಗಕ್ಕೆ ಒಟ್ಟು 23877 ಲ್ಯಾಪ್‌ಟಾಪಗಳ ಅವಶ್ಯಕತೆ ಇದೆ ಎಂಬ ಅಂಶ ಕಂಡುಬಂದಿರುತ್ತದೆ. ಲಾಟ್ -1 ರ ಸರಬರಾಜುದಾರರಿಗೆ ಸದರಿ ಲಾಟ್ ನಲ್ಲಿ ಸರಬರಾಜು ಆದೇಶಕ್ಕಿಂತ ಕಡಿಮೆ ಅವಶ್ಯಕತೆ ಕಂಡುಬಂದ ಕಾರಣ ಸದರಿ ಸರಬುರಾಜುದಾರರಿಗೆ 3091 ಲ್ಯಾಪ್‌ಟಾಪ್‌ಗಳನ್ನು ಲಾಟ್-4 ಕಲಬುರಗಿ ವಿಭಾಗಕ್ಕೆ ಸರಬರಾಜು ಮಾಡುವಂತೆ ಸೂಚಿಸಲಾಯಿತು. ಈ ಪ್ರಕಾರವಾಗಿ ಸರಿದೂಗಿಸಿದ ನಂತರದಲ್ಲಿಯೂ ಕೂಡ ಕಲಬುರಗಿ ವಿಭಾಗ ಲಾಟ್-4ಗೆ ಸರಬರಾಜು ಆದೇಶಕ್ಕಿಂತ 5755 ಹೆಚ್ಚುವರಿ ಲ್ಯಾಪ್‌ಟಾಪ್‌ಗಳ ಅವ್ಯಕತೆ ಇದ್ದು, ಕಲಬುರಗಿ ಜಿಲ್ಲೆಯಲ್ಲಿ 09 ಕಾಲೇಜುಗಳಲ್ಲಿ |

| | | |
|---|---|---|
| | | 952 ವಿದ್ಯಾರ್ಥಿಗಳಿಗೆ ಹಾಗೂ ಯಾದಗಿರಿ ಜಿಲ್ಲೆಯಲ್ಲಿ 04 ಕಾಲೇಜುಗಳಲ್ಲಿ 523 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಸರಬರಾಜು ಮಾಡುವುದು ಬಾಕಿ ಇರುತ್ತದೆ( ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ),ಈ ಸಂಬಂಧ ಪ್ರಕ್ರಿಯೆ ಜಾರಿಯಲ್ಲಿದೆ. |
| ಆ) | ಉಚಿತ ಲ್ಯಾಪ್‌ಟಾಪ್‌ಗಳನ್ನು ಯಾವ ಯಾವ ಸಮುದಾಯದ ವಿದ್ಯಾರ್ಥಿಗಳಿಗೆ ನೀಡಲಾಗಿದೆ; (ವಿವರ ನೀಡುವುದು) | 2019-20ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಥಮ ಪದವಿ ತರಗತಿಗಳಿಗೆ ಪ್ರವೇಶಾತಿ ಪಡೆದಿರುವ ಹಾಗೂ ಕೌಂಟುಂಬಿಕ ವಾರ್ಷಿಕ ಆದಾಯ 2.5 ಲಕ್ಷಗಳಿಂತ ಕಡಿಮೆ ಇರುವ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ನೀಡಲು ಕ್ರಮ ಕೈಗೋಳ್ಳಲಾಗಿದೆ. |
| ಇ) | ಯಾವ ಮಾನದಂಡದ ಆಧಾರದ ಮೇಲೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ? (ವಿವರ ನೀಡುವುದು) | |

ಸಂಖ್ಯೆ: ಇಡಿ 01 ಇಜಿಓವಿ2020

(ಡಾ.ಸಿ.ಎನ್. ಅಶ್ವಥನಾರಾಯಣ)
ಮಾನ್ಯ ಉಪ ಮುಖ್ಯ ಮಂತ್ರಿಗಳು
ಉನ್ನತ ಶಿಕ್ಷಣ,ಮಾಹಿತಿ ತಂತ್ರಜ್ಞಾನ,ಜೈವಿಕ ತಂತ್ರಜ್ಞಾನ,ವಿಜ್ಞಾನ ಮತ್ತು ತಂತ್ರಜ್ಞಾನ,ಕೌಶಲ್ಯಾಭಿವೃದ್ಧಿ,ಉದ್ಯಮ ಶೀಲತೆ ಹಾಗೂ ಜೀವನೋಪಾಯ ಇಲಾಖೆ